All India Radio: Bangalore
National Bulletin In Kannada
10.08.2026  07.35 a.m.

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
10.08.2026  07.35 a.m.

<><><><>

ಮುಖ್ಯಾಂಶಗಳು

- ನವದೆಹಲಿಯಲ್ಲಿ ಕಾಮನ್‌ವೆಲ್ತ್ ಪದಕ ವಿಜೇತ ಕ್ರೀಡಾಪಟುಗಳೊಂದಿಗೆ ಪ್ರಧಾನಿ ನರೇಂದ್ರ ಮೋದಿ ಸಂವಾದ
- ಭಾರತ-ಅಮೆರಿಕ ನೌಕಾಪಡೆಗಳ ನಡುವಿನ ಸ್ಫೋಟಕ ಶಸ್ತ್ರಾಸ್ತ್ರ ವಿಲೇವಾರಿ-ಇಒಡಿ ಸಮರಾಭ್ಯಾಸ : ಕೊಚ್ಚಿಯಲ್ಲಿ ಇಂದಿನಿಂದ ಆರಂಭ
- ಬೊಲಿವಿಯಾಗೆ ೮ ಮೆಟ್ರಿಕ್ ಟನ್ ಜೀವರಕ್ಷಕ ಮತ್ತು ಅತ್ಯಗತ್ಯ ಔಷಧಗಳನ್ನು ಕಳುಹಿಸಿಕೊಟ್ಟ ಭಾರತ
- ಎಫ್‌ಐಎಸ್‌ಯು ವರ್ಲ್ಡ್ ಯೂನಿವರ್ಸಿಟಿ ಸ್ಕ್ವಾಶ್ ಚಾಂಪಿಯನ್ ಶಿಪ್ : ಭಾರತ ತಂಡಕ್ಕೆ ಬೆಳ್ಳಿ ಪದಕ
- ಏಷ್ಯನ್ ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್ : ಮಹಾರಾಜನ್ ಆರುಮುಗಪಾಂಡ್ಯನ್‌ಗೆ ರಜತ ಪದಕ

<><><><>

'ಹರ್ ಘರ್ ತಿರಂಗಾ' ಅಭಿಯಾನದಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ 'ವಿಕಸಿತ ಭಾರತ' ನಿರ್ಮಾಣಕ್ಕೆ ಕೊಡುಗೆ ನೀಡುವ ಸಾಮೂಹಿಕ ಸಂಕಲ್ಪವನ್ನು ಪುನರುಜ್ಜೀವನಗೊಳಿಸಬೇಕೆಂದು ಪ್ರಧಾನಿ ನರೇಂದ್ರ ಮೋದಿ ದೇಶದ ಜನತೆಗೆ ಕರೆ ನೀಡಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ಅವರು, ತ್ರಿವರ್ಣ ಧ್ವಜ, ರಾಷ್ಟ್ರದ ಹೆಮ್ಮೆಯ ಸಂಕೇತವಾಗಿದ್ದು, ದೇಶಕ್ಕಾಗಿ ಸದಾ ಅತ್ಯುತ್ತಮ ಸೇವೆಯನ್ನು ನೀಡಲು ಪ್ರೇರಣೆಯ ಮೂಲವಾಗಿದೆ ಎಂದು ತಿಳಿಸಿದ್ದಾರೆ. ರಾಷ್ಟ್ರೀಯಗೀತೆ 'ವಂದೇ ಮಾತರಂ' ತನ್ನ ೧೫೦ನೇ ವರ್ಷಾಚರಣೆಯನ್ನು ಪೂರೈಸುತ್ತಿರುವ ಈ ಸಂದರ್ಭದಲ್ಲಿ, ಪ್ರಸಕ್ತ ಸಾಲಿನ ಅಭಿಯಾನವನ್ನು 'ವಂದೇ ಮಾತರಂ'ಗೆ ಸಮರ್ಪಿಸಲಾಗುತ್ತಿರುವುದಕ್ಕೆ ಪ್ರಧಾನಿ ಸಂತಸ ವ್ಯಕ್ತಪಡಿಸಿದ್ದಾರೆ.

ಸಂಸ್ಕೃತಿ ಸಚಿವಾಲಯ, ಈ ವರ್ಷದ 'ಹರ್ ಘರ್ ತಿರಂಗಾ' ಅಭಿಯಾನದ ಮೂಲಕ ದೇಶಾದ್ಯಂತ ತಿರಂಗಾ ಯಾತ್ರೆಗಳು, ತಿರಂಗಾ ರ‍್ಯಾಲಿಗಳು, ತಿರಂಗಾ ಸಂಗೀತ ಕಚೇರಿಗಳು ಹಾಗೂ 'ವಂದೇ ಮಾತರಂ' ಸಾಮೂಹಿಕ ಗಾಯನದ ಮೂಲಕ ರಾಷ್ಟ್ರಭಕ್ತಿಯ ಭಾವನೆಯನ್ನು ಮೂಡಿಸಲು ಯೋಜಿಸಿದೆ ಎಂದು ಸಚಿವಾಲಯ ತಿಳಿಸಿದೆ. ಈ ಬಾರಿಯ ಆಚರಣೆಯ ಪ್ರಮುಖ ಆಕರ್ಷಣೆಯಾಗಿ 'ಸೂರ್ಯಪಥ್ ತಿರಂಗಾ' ಎಂಬ ನೂತನ ಉಪಕ್ರಮವನ್ನು ಪರಿಚಯಿಸಲಾಗಿದ್ದು, ಇದು ಪ್ರಪಂಚದಾದ್ಯಂತ ಇರುವ ಭಾರತೀಯರನ್ನು ತ್ರಿವರ್ಣ ಧ್ವಜದ ಜಾಗತಿಕ ಸಂಭ್ರಮಾಚರಣೆಯಲ್ಲಿ ಒಂದಾಗಿಸುವ ವಿಶಿಷ್ಟ ಪ್ರಯತ್ನವಾಗಿದೆ. ನಾಗರಿಕರು ತಮ್ಮ ಮನೆಗಳಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿ, ತಮ್ಮ ಸೆಲ್ಫಿಗಳನ್ನು 'ಹರ್ ಘರ್ ತಿರಂಗಾ' ಜಾಲತಾಣದಲ್ಲಿ ಅಪ್‌ಲೋಡ್ ಮಾಡುವಂತೆ ಸಚಿವಾಲಯ ಮನವಿ ಮಾಡಿದೆ.

<><><><>

ಪ್ರಧಾನಿ ನರೇಂದ್ರ ಮೋದಿ, ನವದೆಹಲಿಯ ತಮ್ಮ ನಿವಾಸದಲ್ಲಿ ನಿನ್ನೆ ೨೦೨೬ರ ಕಾಮನ್‌ವೆಲ್ತ್ ಕ್ರೀಡಾಕೂಟದ ಪದಕ ವಿಜೇತರನ್ನು ಭೇಟಿಮಾಡಿ, ಸಂವಾದ ನಡೆಸಿದರು. ಈ ಸಂದರ್ಭದಲ್ಲಿ ಪದಕ ವಿಜೇತರು, ಪ್ರಧಾನಮಂತ್ರಿಯವರೊಂದಿಗೆ ಕ್ರೀಡಾಕೂಟದ ತಮ್ಮ ಅನುಭವಗಳನ್ನು ಹಂಚಿಕೊಂಡರು. ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ ಪ್ರಧಾನಿ, ಪ್ರತಿಯೊಬ್ಬರೂ ತಮ್ಮ ಅಸಾಧಾರಣ ಪ್ರದರ್ಶನದ ಮೂಲಕ, ದೇಶ ಹೆಮ್ಮೆ ಪಡುವಂತೆ ಮಾಡಿದ್ದಾರೆ, ಅವರ ಯಶಸ್ಸು, ಅನೇಕ ಯುವಕರನ್ನು ಪ್ರೇರೇಪಿಸುತ್ತದೆ ಎಂದು ಹೇಳಿದ್ದಾರೆ. ಈ ಸಂಬಂಧ ಅವರು ವೀಡಿಯೊ ಸಂದೇಶವನ್ನು ಹಂಚಿಕೊಂಡು, ಯಾರು ಆಡುತ್ತಾರೆ, ಅವರು ಅರಳುತ್ತಾರೆ. ಕ್ರೀಡಾಪಟುಗಳನ್ನು ನಾಗರಿಕರು ಯಾವಾಗಲೂ ಹುರಿದುಂಬಿಸಬೇಕೆಂದು ಮನವಿ ಮಾಡಿದ್ದಾರೆ. ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಮನ್ಸುಖ್ ಮಾಂಡವಿಯಾ ಮತ್ತು ಯುವ ವ್ಯವಹಾರಗಳು ಮತ್ತು ಕ್ರೀಡಾ ರಾಜ್ಯ ಸಚಿವೆ ರಕ್ಷಾ ಖಾಡ್ಸೆ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಜುಲೈ ೨೩ ರಿಂದ ಈ ತಿಂಗಳ ೨ ರವರೆಗೆ ಸ್ಕಾಟ್ಲೆಂಡ್‌ನ ಗ್ಲಾಸ್ಗೋದಲ್ಲಿ ನಡೆದ ಕ್ರೀಡಾಕೂಟದಲ್ಲಿ, ಪದಕ ಪಟ್ಟಿಯಲ್ಲಿ ಭಾರತ, ೪ ನೇ ಸ್ಥಾನದಲ್ಲಿತ್ತು. ವಿವಿಧ ಕ್ರೀಡೆಗಳಲ್ಲಿ ಭಾರತೀಯ ಕ್ರೀಡಾಪಟುಗಳು, ೧೩ ಚಿನ್ನ, ೧೭ ಬೆಳ್ಳಿ ಮತ್ತು ಒಂಬತ್ತು ಕಂಚು ಸೇರಿದಂತೆ ೩೯ ಪದಕಗಳನ್ನು ಗೆದ್ದಿದ್ದಾರೆ.

<><><><>

ಭಾರತೀಯ ನೌಕಾಪಡೆ ಹಾಗೂ ಅಮೆರಿಕಾ ನೌಕಾಪಡೆಯ ಸ್ಫೋಟಕ ಶಸ್ತ್ರಾಸ್ತ್ರ ವಿಲೇವಾರಿ-ಇಒಡಿ ಸಮರಾಭ್ಯಾಸ- ೨೦೨೬ ಇಂದಿನಿಂದ ಈ ತಿಂಗಳ ೧೪ ರವರೆಗೆ, ಕೊಚ್ಚಿಯ ದಕ್ಷಿಣ ನೌಕಾ ಕಮಾಂಡ್‌ನಲ್ಲಿ ನಡೆಯಲಿದೆ. ಈ ದ್ವಿಪಕ್ಷೀಯ ಸಮರಾಭ್ಯಾಸ, ಪರಸ್ಪರ ಕಾರ್ಯಸಾಧ್ಯತೆಯನ್ನು ಹೆಚ್ಚಿಸುವ ಮತ್ತು ಎರಡೂ ನೌಕಾಪಡೆಗಳ ಡೈವಿಂಗ್ ಮತ್ತು ಇಒಡಿ ತಂಡಗಳ ನಡುವೆ, ವೃತ್ತಿಪರ ಸಹಕಾರವನ್ನು ಬಲಪಡಿಸುವ ಗುರಿಯನ್ನು ಹೊಂದಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಐದು ದಿನಗಳ ಈ ಸಮರಾಭ್ಯಾಸ, ವಿಷಯ ತಜ್ಞರ ವಿನಿಮಯ, ತರಬೇತಿ, ಸಲಕರಣೆಗಳ ಪ್ರಾತ್ಯಕ್ಷಿಕೆಗಳು ಮತ್ತು ಸನ್ನಿವೇಶ-ಆಧಾರಿತ ಪ್ರಾಯೋಗಿಕ ವ್ಯಾಯಾಮಗಳನ್ನು ಒಳಗೊಂಡಿರುತ್ತದೆ. ಭಾರತೀಯ ನೌಕಾಪಡೆ ಮತ್ತು ಅಮೆರಿಕಾ ನೌಕಾಪಡೆಯು, ೨೦೦೫ ರಿಂದ ಜಂಟಿ ರಕ್ಷಣೆ ಮತ್ತು ಇಒಡಿ ಸಮರಾಭ್ಯಾಸಗಳನ್ನು ನಡೆಸುತ್ತಿವೆ.

<><><><>

ಭಾರತ ಪಳೆಯುಳಿಕೆಯೇತರ ಮೂಲಗಳಿಂದ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯದಲ್ಲಿ ೩೦೦ ಗಿಗಾವಾಟ್ ಮೈಲಿಗಲ್ಲನ್ನು ದಾಟಿದೆ. ಕಳೆದ ತಿಂಗಳ ೩೧ ರಂದು ಈ ಸಾಧನೆ ಮಾಡಲಾಗಿದ್ದು, ಇದು ೨೦೩೦ ರ ವೇಳೆಗೆ ದೇಶ ನಿಗದಿಪಡಿಸಿಕೊಂಡಿರುವ ೫೦೦ ಗಿಗಾವಾಟ್ ಗುರಿಯ ಶೇಕಡಾ ೬೦ ಕ್ಕಿಂತಲೂ ಹೆಚ್ಚಿನ ಪ್ರಮಾಣವಾಗಿದೆ. ದೇಶದ ಒಟ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯದಲ್ಲಿ ಪಳೆಯುಳಿಕೆಯೇತರ ಇಂಧನದ ಪಾಲು ಈಗ ಶೇಕಡಾ ೫೪ ಕ್ಕಿಂತ ಹೆಚ್ಚಾಗಿದೆ ಎಂದು ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ ತಿಳಿಸಿದೆ. ಸೌರ ಇಂಧನ ಕ್ಷೇತ್ರ ಈ ಬೆಳವಣಿಗೆಯ ಮುಖ್ಯ ಚಾಲಕ ಶಕ್ತಿಯಾಗಿದ್ದು, ೨೦೧೪ ರಲ್ಲಿ ಕೇವಲ ೨.೮ ಗಿಗಾವಾಟ್ ಇದ್ದ ಸೌರಶಕ್ತಿ ಸಾಮರ್ಥ್ಯ ಪ್ರಸ್ತುತ ಸುಮಾರು ೧೬೫ ಗಿಗಾವಾಟ್‌ಗೆ ತಲುಪಿದೆ. ೨೦೨೫-೨೬ ರ ಸಾಲಿನಲ್ಲಿ ದೇಶದಲ್ಲಿ ದಾಖಲೆಯ ೫೫.೨೯ ಗಿಗಾವಾಟ್ ಪಳೆಯುಳಿಕೆಯೇತರ ವಿದ್ಯುತ್ ಸಾಮರ್ಥ್ಯವನ್ನು ಸೇರ್ಪಡೆಗೊಳಿಸಲಾಗಿದ್ದು, ಇದರಲ್ಲಿ ಸೌರಶಕ್ತಿಯಿಂದ ೪೪.೬ ಗಿಗಾವಾಟ್ ಹಾಗೂ ಪವನ ಶಕ್ತಿಯಿಂದ ೬ ಗಿಗಾವಾಟ್ ಕೊಡುಗೆ ಸೇರಿದೆ. ನವೀಕರಿಸಬಹುದಾದ ಇಂಧನ ಉತ್ಪಾದನೆಯು ೨೦೧೪-೧೫ ರಲ್ಲಿ ಸುಮಾರು ೧೯೧ ಬಿಲಿಯನ್ ಯೂನಿಟ್‌ಗಳಷ್ಟಿದ್ದು, ೨೦೨೫-೨೬ ರಲ್ಲಿ ೪೭೭ ಬಿಲಿಯನ್ ಯೂನಿಟ್‌ಗಳಿಗೂ ಅಧಿಕ ಪ್ರಮಾಣಕ್ಕೆ ಏರಿಕೆಯಾಗಿದೆ.

<><><><>

ಬೊಲಿವಿಯಾದ ಸಾರ್ವಜನಿಕ ಆರೋಗ್ಯ ರಕ್ಷಣಾ ಸಾಮರ್ಥ್ಯಕ್ಕೆ ಬೆಂಬಲವಾಗಿ ಭಾರತ, ೮ ಮೆಟ್ರಿಕ್ ಟನ್ ಜೀವ ರಕ್ಷಕ ಮತ್ತು ಅತ್ಯಗತ್ಯ ಔಷಧಗಳ ನೆರವನ್ನು ಕಳುಹಿಸಿಕೊಟ್ಟಿದೆ. ಒಗ್ಗಟ್ಟು ಮತ್ತು ಜಂಟಿ ಪ್ರಗತಿಯ ಮೂಲಕ ಸಹಕಾರವನ್ನು ಮುನ್ನಡೆಸಲು ಭಾರತ, ಸದಾ ಸಿದ್ಧವಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಸಾಮಾಜಿಕ ಜಾಲತಾಣದ ಸಂದೇಶದಲ್ಲಿ ತಿಳಿಸಿದೆ.

<><><><>

ಜಾರ್ಖಂಡ್‌ನ ಉದ್ಯೋಗ ನೇಮಕಾತಿ ಪರೀಕ್ಷೆಗಳಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳನ್ನು ವಿರೋಧಿಸಿ ವಿದ್ಯಾರ್ಥಿಗಳು ಇಂದು ಹಮ್ಮಿಕೊಂಡಿರುವ ಪ್ರತಿಭಟನೆಯ ಹಿನ್ನೆಲೆಯಲ್ಲಿ ಜಾರ್ಖಂಡ್ ಪೊಲೀಸರು ರಾಂಚಿ ವಿಧಾನಸೌಧದ ಸುತ್ತಮುತ್ತ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ ಹಾಗೂ ನಗರಾದ್ಯಂತ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ. ಇದೇ ೭ ರಿಂದ ೧೨ ರವರೆಗೆ ವಿಧಾನಸೌಧ ಕಟ್ಟಡದ ೭೫೦ ಮೀಟರ್ ವ್ಯಾಪ್ತಿಯಲ್ಲಿ ಈ ನಿಷೇಧಾಜ್ಞೆ ಜಾರಿಯಲ್ಲಿರಲಿದೆ. ಕಳೆದ ೧೭ ದಿನಗಳಿಂದ ವಿದ್ಯಾರ್ಥಿಗಳು ನಡೆಸುತ್ತಿರುವ ಪ್ರತಿಭಟನೆಯಲ್ಲಿ ೭ ಮಂದಿ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದಾರೆ. ರಾಜ್ಯದ ವಿವಿಧ ಭಾಗಗಳಿಂದ ರಾಜಧಾನಿಗೆ ಆಗಮಿಸುತ್ತಿರುವ ವಿದ್ಯಾರ್ಥಿಗಳನ್ನು ಪೊಲೀಸರು ಒತ್ತಾಯ ಪೂರ್ವಕವಾಗಿ ತಡೆಯುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದ್ದಾರೆ. ಮತ್ತೊಂದೆಡೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಆದಿತ್ಯ ಸಾಹು ಅವರನ್ನು ಗೃಹ ಬಂಧನದಲ್ಲಿಡಲಾಗಿದೆ ಎಂದು ಪಕ್ಷದ ಮುಖಂಡ ಅಮರ್ ಬೌರಿ ಆರೋಪಿಸಿದ್ದಾರೆ. ಈ ನಡುವೆ ವಿದ್ಯಾರ್ಥಿಗಳ ಪ್ರತಿಭಟನೆ ತೀವ್ರಗೊಂಡ ಬೆನ್ನಲ್ಲೆ ಜಾರ್ಖಂಡ್ ಲೋಕಸೇವಾ ಆಯೋಗದ ಮೂವರು ಹಾಲಿ ಸದಸ್ಯರು ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದಾರೆ. ಸದಸ್ಯರಾದ ಅಜಿತಾ ಭಟ್ಟಾಚಾರ್ಯ, ಜಮೀಲ್ ಅಹ್ಮದ್ ಮತ್ತು ಅನಿಮಾ ಹನ್ಸ್‌ದಾ ನಿನ್ನೆ ರಾಜ್ಯಪಾಲ ಸಂತೋಷ್ ಕುಮಾರ್ ಗಂಗ್ವಾರ್ ಅವರಿಗೆ ತಮ್ಮ ರಾಜೀನಾಮೆ ಪತ್ರಗಳನ್ನು ಸಲ್ಲಿಸಿದ್ದಾರೆ. ರಾಜ್ಯಪಾಲರು ಈ ರಾಜೀನಾಮೆಗಳನ್ನು ಅಂಗೀಕರಿಸಿದ್ದಾರೆ.

<><><><>

ಆಯಾಕಟ್ಟಿನ ಸಮುದ್ರ ಮಾರ್ಗಗಳ ಮೇಲಿನ ಅವಲಂಬನೆಯನ್ನು ಕಡಿಮೆಮಾಡಲು ಹಿಂದೂ ಮಹಾಸಾಗರ ಹಾಗೂ ಭಾರತವನ್ನು ಸಂಪರ್ಕಿಸುವ ಪರ್ಯಾಯ ರೈಲು ಮಾರ್ಗದ ಸಾಧ್ಯತೆಗಳನ್ನು ಪರಿಶೀಲಿಸಲು ರಷ್ಯಾ ಪ್ರಸ್ತಾಪಿಸಿದೆ.

ಹರ್ಮೋಜ್ ಮತ್ತು ಜಲಸಂಧಿ ಬೊಸ್ಫೋರಸ್ ಜಲಸಂಧಿಗಳಂತಹ ಪ್ರಮುಖ ಜಲಮಾರ್ಗಗಳಲ್ಲಿ ಎದುರಾಗುತ್ತಿರುವ ಅಪಾಯಗಳನ್ನು ಎದುರಿಸಲು ಪರ್ಯಾಯ ಮಾರ್ಗಗಳು ನೆರವಾಗಲಿವೆ ಎಂದು ರಷ್ಯಾ ಉಪಪ್ರಧಾನಿ ಮರಾತ್ ಖುಸ್ನುಲಿನ್ ತಿಳಿಸಿದ್ದಾರೆ. ರಷ್ಯಾ ಸರ್ಕಾರಿ ಸುದ್ದಿಸಂಸ್ಥೆ ವರದಿಯಂತೆ ತುರ್ಕಮೆನಿಸ್ತಾನ್, ಇರಾನ್ ಮತ್ತು ಅಫ್ಘಾನಿಸ್ತಾನ್ ಮೂಲಕ ಹಾದುಹೋಗುವ ರೈಲು ಮಾರ್ಗಗಳನ್ನು ಪರಿಶೀಲಿಸುವ ಮೂಲಕ ಭಾರತಕ್ಕೆ ಪ್ರವೇಶ ಅವಕಾಶ ಕಲ್ಪಿಸಬಹುದು ಎಂದು ರಷ್ಯಾ ಉಪಪ್ರಧಾನಿ ತಿಳಿಸಿದ್ದಾರೆ.

<><><><>

ಮುಂಬೈನ ಸೋಮಯ್ಯ ವಿದ್ಯಾವಿಹಾರ್ ವಿಶ್ವವಿದ್ಯಾಲಯದಲ್ಲಿ ನಿನ್ನೆ ನಡೆದ ೨೦೨೬ರ ಎಫ್.ಐ.ಎಸ್.ಯು ವರ್ಲ್ಡ್ ಯೂನಿವರ್ಸಿಟಿ ಸ್ಕ್ವಾಷ್ ಚಾಂಪಿಯನ್‌ಶಿಪ್‌ನ ಫೈನಲ್ ಪಂದ್ಯದಲ್ಲಿ, ಹಾಂಗ್ ಕಾಂಗ್ ಚೀನಾ ವಿರುದ್ಧ ಸೋತ ನಂತರ ಭಾರತ ತಂಡ, ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟಿತು. ಭಾರತೀಯ ತಂಡ, ೨-೨ ಅಂತರದಲ್ಲಿ ಟೈ ಮುಗಿದ ನಂತರ, ಹಾಂಗ್‌ಕಾಂಗ್ ಚೀನಾ ವಿರುದ್ಧ ಗೇಮ್ ವ್ಯತ್ಯಾಸದ ಆಧಾರದ ಮೇಲೆ, ಫೈನಲ್‌ನಲ್ಲಿ ಸೋತಿತು. ೨೦೨೬ರ ಏಷ್ಯನ್ ಗೇಮ್ಸ್ ತಂಡದ ಭಾಗವಾಗಿರುವ ಸೂರಜ್ ಕುಮಾರ್ ಚಂದ್, ಕಳೆದ ಗುರುವಾರ ಎಫ್.ಐ.ಎಸ್.ಯು ವರ್ಲ್ಡ್ ಯೂನಿವರ್ಸಿಟಿ ಸ್ಕ್ವಾಷ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಮೊದಲ ಚಿನ್ನದ ಪದಕ ವಿಜೇತರಾಗುವ ಮೂಲಕ ಇತಿಹಾಸ ಬರೆದಿದ್ದರು.

<><><><>

ಉಜ್ಬೇಕಿಸ್ತಾನ್‌ನ ತಾಷ್ಕೆಂಟ್‌ನಲ್ಲಿ ನಡೆದ ಏಷ್ಯನ್ ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ, ಪುರುಷರ ೬೫ ಕೆ.ಜಿ ವಿಭಾಗದಲ್ಲಿ ಭಾರತೀಯ ವೇಟ್‌ಲಿಫ್ಟರ್ ಮಹಾರಾಜನ್ ಆರುಮುಗಪಾಂಡ್ಯನ್ ರಜತ ಪದಕ ತಮ್ಮದಾಗಿಸಿಕೊಂಡಿದ್ದಾರೆ. ಮಹಾರಾಜನ್ ವೈಯಕ್ತಿಕ ಅತ್ಯುತ್ತಮ ಸಾಧನೆಯಾಗಿ ಒಟ್ಟು ೨೮೫ ಕೆ.ಜಿ ಭಾರ ಎತ್ತಿದರು, ಸ್ನ್ಯಾಚ್‌ನಲ್ಲಿ ೧೨೮ ಕೆ.ಜಿ ಮತ್ತು ಕ್ಲೀನ್ ಮತ್ತು ಜರ್ಕ್‌ನಲ್ಲಿ ೧೫೭ ಕೆ.ಜಿ ಭಾರ ಎತ್ತುವ ಮೂಲಕ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು. ವಿಯೆಟ್ನಾಂನ ಹೋಂಗ್ ಥಾಚ್ ಒಟ್ಟು ೨೯೧ ಕೆ.ಜಿ ಭಾರ ಎತ್ತುವ ಮೂಲಕ ಚಿನ್ನದ ಪದಕ ಗೆದ್ದರು.

<><><><>

ಅಹಮದಾಬಾದ್‌ನಲ್ಲಿ ಇದೇ ೧೩ ರಿಂದ, ೨೩ ರವರೆಗೆ, ೧೮ ವರ್ಷದೊಳಗಿನವರ ಫಿಬಾ ಏಷ್ಯಾ ಬ್ಯಾಸ್ಕೆಟ್‌ಬಾಲ್ ಕಪ್ ಅನ್ನು ಆಯೋಜಿಸಲಿದೆ. ಆಗಸ್ಟ್ ೧೪ ರಂದು ಭಾರತ-ಜಪಾನ್ ಮುಖಾಮುಖಿಯಾಗಲಿರುವ ಮೊದಲ ಪಂದ್ಯದೊಂದಿಗೆ ಕ್ರೀಡಾಕೂಟ ಆರಂಭವಾಗಲಿದ್ದು, ಗುಂಪು ಹಂತದಲ್ಲಿ ಭಾರತ ತಂಡ, ಕೊರಿಯಾ, ಜಪಾನ್ ಮತ್ತು ಕಜಕಿಸ್ತಾನ್ ತಂಡಗಳನ್ನು ಎದುರಿಸಲಿದೆ. ಫೈನಲ್ ಪಂದ್ಯ ಇದೇ ೨೩ ರಂದು ಜರುಗಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>